ಬೆಂಗಳೂರು ಡಿಸ್ಟ್ರಿಕ್ಟ್.

ಇನ್ಸ್ಟಹಾರ್.

ತಾರೀಖು 10ನೆ ಜೂನ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ — ಚನ್ನಪಟ್ಣದ ತಾಲ್ಲೂಕು ಮಳೂರು ಹೋಬಳಿ ಮಳೂರು ಪಟ್ಣದ ದಾಖಲೆ ಭೈರಾಪಟ್ಣದಲ್ಲಿರುವ ಕುಂಟಲಿಂಗೇಗೌಡನೆಂಬವನು ಆ ಗ್ರಾಮವು ತನ್ನ ಹಿಡುವಳಿ ಸರ್ವೆ 602ನೆ ನಂಬ್ರ ಜಮೀನಲ್ಲಿ ಅಗಿಯುವ ವ್ಯಾಳೆ ಈ ಕೆಳಗೆ ಕಂಡ ಸ್ವತ್ತುಗಳು ಶಿಕ್ಕಿ ಕ್ಕುವದಾಗಿ ಹಿಡುವಳಿದಾರ ತಾಲ್ಲೂಕಿಗೆ ಹಾಜರ್ಮಾಡಿರುತ್ತಾನೆ. ಇದರ ಹಕ್ಕು ಬಾಧ್ಯತೆ ಉಳ್ಳವರು 1907ನೆ ಡಿಸೆಂಬರ್ ಮಾಹೆ ಆಖೈರು ವಳಗಾಗಿ ಬೆಂಗಳೂರು ಡಿಸ್ಟ್ರಿಕ್ಟ್ ಕ್ಲೋಸ್‌ಪೇಟೆ ಸಬ್ ಡಿವಿಜ್ಞ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರಲ್ಲಿ ಹಾಜರಾಗಿ ತಮ್ಮ ಹಕ್ಕನ್ನು ಸ್ಥಿರಪಡಿಸಿಕೊಟ್ಟು ಸದರೀ ಮಾಲು ಪಡಿಯಬಹುದು. ತಪ್ಪಿದಲ್ಲಿ ಸದರಿ ಸ್ವತ್ತನ್ನು ಮೇಲ್ಕಂಡ ಕುಂಟಲಿಂಗೇ ಗೌಡನಿಗೆ ಪಾವತಿ ಮಾಡಲ್ಪಡುತ್ತೆ. ನಂತರ ಬರುವ ತಕರಾರುಗಳು ಅಂಗೀಕರಿಲ್ಪಡುವದಿಲ್ಲಾ.

ಸ್ವತ್ತುಗಳ ತಪಶೀಲ್.

		ಅಂದಾಜ. ರೂ.	ಆ.	ಪೈ.
1.	ಲಕ್ಷ್ಮಿದೇವಿ ತಾಳಿ ತರು ಕಾಕಿನ ಅಗಲ್ಲಾ, ಮುತ್ತು ಸುತ್ತಿಕೊಂಡು ಇರತಕ್ಕದ್ದು	0	4	0
2.	ಸಾಧಾರಣ ಗುಂಡು ತಾಳಿ ಮೇಲೆ ಗೆಂಡು ಇರತಕ್ಕದ್ದು 1 ...	0	4	0
3.	ಭಂಗಾರದ ಹಣಗಳು 8	2	5	4
4.	ಕಿವಿಗೆ ಹಾಕಿಕೊಳ್ಳುವ ಎರಡು ಬಿಳಿ ಕೊಂಡಿಗಳು	0	1	0
5.	ಚೆನ್ನದ ಸಂಣ ಗುಂಡು ತೊಗರಿಕಾಳು ಪಾತ್ರ ಇರತಕ್ಕದ್ದು 1 ...	0	1	0
6.	ಬಣ್ಣ ಕೆಟ್ಟುಹೋದ ಹವಳ 1	0	0	1
7.	ಬಿಳಿ ಕಲ್ಲು ಮಣಿ 1 ...	0	0	1
	ಜುಮ್ಲಾ ...	2	15	6

ಟಿ. ರಾಯಲುಚೆಟ್ಟು,
ಫೋರ್ ಡೆಪ್ಯುಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟ್.

1907ನೆ ಇಸವಿ ಮೇ ಮಾಹೆ 18ನೆ ತಾರೀಖು ಶನಿವಾರ ನಡದ ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ವಿಾಟಂಗಿನ ಪ್ರೊಸೀಡಿಂಗ್ಸು.

ಹಾಜರಿದ್ದವರು.

1. ಪ್ರೆಸಿಡೆಂಟರು, ಮೆ॥ ಎಂ. ಕಾಂತರಾಜೆ ಅರಸಿನವರು.
2. ಹುಣಸೂರು ಡಿವಿಜ್ಞ ಅಸಿಸ್ಟೆಂಟ್ ಕಮಿಷನರ್ ಮೆ॥ ಎ. ಸುಬ್ರಹ್ಮಣ್ಯ ಐಯ್ಯರು.
3. ಕೃಷ್ಣರಾಜಪೇಟೆ ಸಬ್ ಡಿವಿಜ್ಞ ಅಸಿಸ್ಟೆಂಟ್ ಕಮಿಷನರ್ ಮೆ॥ ಬಿ. ಕೃಷ್ಣರಾಯರು.
4. ಮೈಸೂರು ಸಬ್ ಡಿವಿಜ್ಞ ಅಸಿಸ್ಟೆಂಟ್ ಕಮಿಷನರ್ ಮೆ॥ ಟಿ. ಕೆ. ಸುಂದರರಾಜೈಯ್ಯಂಗಾರ್ರು.
5. ಮೈಸೂರು ಡಿಸ್ಟ್ರಿಕ್ಟ್ ಸ್ಕೂಲುಗಳ ಡೆಪ್ಯುಟಿ ಇನ್ಸ್ಪೆಕ್ಟರು ಮೆ॥ ಎಂ. ರಾಮಸ್ವಾಮಯ್ಯನವರು.
6. ನಂಜನಗೂಡು ಸಬ್ ಡಿವಿಜ್ಞ ಅಸಿಸ್ಟೆಂಟ್ ಕಮಿಷನರ್ ಮೆ॥ ಎಸ್. ವೈದ್ಯನಾಥೈಯ್ಯರವರು.
7. ಮೈಸೂರು ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟೆರಿ ಆಫಿಸರ್ ಮೆ॥ ಟಿ. ಎಸ್. ನಂಜಪ್ಪನವರು.

"ಡಿ" ಕ್ಲಾಜಿನ ಮೇರೆ ಪ್ರಜಾ ಪ್ರತಿನಿಧಿಗಳು.

ಹೆಸರು.	ತಾಲ್ಲೂಕು.
ಮೆ॥ ಅಂಬ್ಳೆ ಅಂಣಯ್ಯ ಪಂಡಿತರು ...	ಮೈಸೂರು.
,, ಅಂತಪಳ್ಳಿ ಮುದ್ದೇಗೌಡರು ...	ಹುಣಸೂರು.
,, ಪಡುವಕೋಟೆ ಸುಬ್ಬರಾಯರು ...	ಹೆಗ್ಗಡದೇವನಕೋಟೆ.
,, ಭೀಮರಾಯರು ...	ನಂಜನಗೂಡು.
,, ನಾಡಿಗ್ ಕೃಷ್ಣಪ್ಪನವರು ...	ಕೃಷ್ಣರಾಜಪೇಟೆ.
,, ಚಂದ್ರಶೇಖರೈಯ್ಯನವರು ...	ನಾಗಮಂಗಲ.
,, ವಾಸುದೇವಯ್ಯನವರು ...	ಚಾಮರಾಜನಗರ.
,, ಟಿ. ಕೃಷ್ಣರಾಯರು ...	ಟಿ. ನರಸೀಪುರ.